ಕರ್ನಾಟಕ ವಿಧಾನಸಭೆ

ಬುಧವಾರ, ದಿನಾಂಕ: 16ನೇ ಮಾರ್ಚ್, 2011ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 12 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು

ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಧರಣಿ

ವಿಷಯ : ಪ್ರೇರಣಾ ಎಜುಕೇಶನಲ್ ಅಂಡ್ ಸೋಷಿಯಲ್ ಟ್ರಸ್ಟ್‌ನವರಿಗೆ ಹಲವಾರು ಸಂಘ ಸಂಸ್ಥೆಗಳು ದೇಣಿಗೆ ನೀಡಿರುವ ಬಗ್ಗೆ ಸಿ.ಬಿ.ಐ. ತನಿಖೆ ಕೋರಿ ಪ್ರತಿಪಕ್ಷಗಳಿಂದ ಧರಣಿ.

(ಸದನವು ಬೆಳಗೆ : 12 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷದ ಶಾಸಕರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)

ಅಧ್ಯಕ್ಷರು : ಈಗ ಪ್ರಶ್ನೋತ್ತರ.

ಶ್ರೀ ಸಿದ್ದರಾಮಯ್ಯ : ನಾವು ಧರಣಿ ಮಾಡುತ್ತಿದ್ದೇವೆ, ನೀವು ಪ್ರಶ್ನೋತ್ತರ ಅಂದರೆ ಹೇಗೆ ?

ಅಧ್ಯಕ್ಷರು : ಯಾರು ಧರಣಿಯಲ್ಲಿ ಇರಲಿಲ್ಲ, ಅದಕ್ಕೆ ಪ್ರಶ್ನೋತ್ತರ ಚರ್ಚೆಗೆ ಕರೆದೆ.

ಶ್ರೀ ಸಿದ್ದರಾಮಯ್ಯ : ಸ್ವಲ್ಪ ಸರ್ಕಾರದವರಿಗೆ ನೀವು ಹೇಳಿ.

ಅಧ್ಯಕ್ಷರು : ನಾನು ಬಂದು ಕುಳಿತಾಗ ಯಾರು ಧರಣಿಯಲ್ಲಿ ಇರಲಿಲ್ಲ. I have to...

ಶ್ರೀ ಸಿದ್ದರಾಮಯ್ಯ : You give a direction. ಏನಾದರೂ ಮಾಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ನಿಮಗೆ ಬಿಟ್ಟುಕೊಟ್ಟಿದ್ದಾರೆ. ಯಾವುದೇ ತನಿಖೆಗೆ ತಯಾರು ಎಂದು ಹೇಳಿದ್ದಾರೆ. ಅಧ್ಯಕ್ಷರು ಹೇಳಿದಕ್ಕೆ ಒಪ್ಪಿಕೊಳ್ಳುತ್ತೇನೆಂದು ಹೇಳಿದ್ದಾರೆ. ದಯಮಾಡಿ ಸಿ.ಬಿ.ಐ.ಗೆ ಒಪ್ಪಿಕೊಳ್ಳುವುದಕ್ಕೆ ಹೇಳಿ.

(ಸದನದಲ್ಲಿ ನಿಂತು ಮಾತನಾಡುವುದು ಯಾವುದು ದಾಖಲೆಗೆ ಹೋಗುವುದಿಲ್ಲ)

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಧಾವಿಸಿ ಬಂದಿದ್ದನ್ನು ನೋಡಿ ಇವತ್ತು ಕಲಾಪ ಪ್ರಾರಂಭವಾಗುತ್ತದೆ, ಅದಕ್ಕಾಗಿ ಧಾವಿಸಿ ಬಂದರು ಎಂದು ನಾನು ಅಂದುಕೊಂಡೆ.

(ಈ ಹಂತದಲ್ಲಿ ಶ್ರೀ ಸಿದ್ದರಾಮಯ್ಯ ಮತ್ತು ವಿ. ಶ್ರೀನಿವಾಸ ಪ್ರಸಾದರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು, ಇದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ ಎಂದು ಮಾನ್ಯ ಅಧ್ಯಕ್ಷರು ಸೂಚಿಸಿದರು)

ಶ್ರೀ ಬಂಡೆಪ್ಪ ಕಾಂಶೆಪೂರ: ಮಾನ್ಯ ಮುಖ್ಯಮಂತ್ರಿಗಳು ಯಾವುದೇ ತನಿಖೆಗೆ ಸಿದ್ಧ ಎಂದು ಹೇಳಿದ್ದಾರೆ. ನಿಮ್ಮ ಮೇಲೆ ಬಿಟ್ಟಿರುವುದರಿಂದ ನೀವು ನಿರ್ಣಯ ತೆಗೆದುಕೊಂಡು ಬಿಡಿ.

ಅಧ್ಯಕ್ಷರು : ನಮ್ಮ ನಿಯಮಾವಳಿಯಲ್ಲಿ ಇದಕ್ಕೆ ಅವಕಾಶವಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಜೆಪಿಸಿ ಕುರಿತು ಕೊನೆಗೂ ಕೂಡ ಕೇಂದ್ರದ ಯುಪಿಎ ಸರ್ಕಾರ they did not come out with a statement. ಆದರೆ ಮುಖ್ಯಮಂತ್ರಿಗಳು ಪೂರ್ತಿ ವಿವರಣೆಯನ್ನು ಕೊಟ್ಟಿದ್ದಾರೆ. Satisfactory explanation ಕೊಟ್ಟಿದ್ದಾರೆ. There it ends.

(ಗೊಂದಲ)

ಇಲ್ಲಾದರೂ ಕೂಡ ಚರ್ಚೆಯನ್ನು ಮಾಡಿದೆವು. You are right. ಅದಕ್ಕೆ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಸದನದ ಬಾವಿಯಿಂದ ಮಾತನಾಡಿದರೂ ಯಾವುದು ದಾಖಲೆಗೆ ಹೋಗುವುದಿಲ್ಲ. ಬಾವಿಯಲ್ಲಿ ನಿಂತು ಏನು ಚರ್ಚೆ ಮಾಡಿದರು ಉಪಯೋಗವಿಲ್ಲ

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಇದು ನಮ್ಮ ಅನುಭವವಲ್ಲ. ಇಡೀ ದೇಶದ ಅನುಭವ ಸಿ.ಬಿ.ಐ. ಏನು ಮಾಡಿದೆ ಎಂದು. ಆರುಷಿ ಪ್ರಕರಣದವರೆಗೂ ಏನು ಮಾಡಿದೆ ಎಂದು ಗೊತ್ತಿದೆ ನಿಮಗೆ.

(ಗೊಂದಲ)

ಡಾ : ಚಿತ್ತರಂಜನ್ ಕೇಸ್‌ನಲ್ಲಿ ..... it is left to you ನೀವೇನು ಹೇಳುತ್ತೀರಿ ಎಂದು. ಸಿ.ಬಿ.ಐ. ಯಂತಹ ಒಂದು ಶ್ರೇಷ್ಠ ಸಂಸ್ಥೆಯನ್ನು ರಾಜಕೀಕರಣಗೊಳಿಸಿದ್ದು ಕಾಂಗ್ರೆಸ್ ಮತ್ತು ಯುಪಿಎ ಸರ್ಕಾರ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಡಾ : ಚಿತ್ತರಂಜನ್ ಕೇಸ್‌ನಲ್ಲಿ CBI ನವರದು ಏನಾಯಿತು ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಸದನದ ಬಾವಿಯಲ್ಲಿ ನಿಂತು ಇಷ್ಟೊಂದು ಮಾತನಾಡಿದರೆ ಹೇಗಾಗುತ್ತದೆ ಸರ್. ಮಾನ್ಯ ಶ್ರೀನಿವಾಸ ಪ್ರಸಾದರವರೆ ನಿಮ್ಮಂಥವರು ಸದನದ ಬಾವಿಯಲ್ಲಿ ನಿಲ್ಲುವುದು ಸರಿ ಇದೆಯೇ ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನೀವು ಏನಾದರೂ ಮಾತನಾಡುವುದು ಇದ್ದರೆ ನಿಮ್ಮ ಸ್ಥಾನಕ್ಕೆ ಬಂದು ಮಾತನಾಡಿ. ಸಿದ್ದರಾಮಯ್ಯನವರಿಗೆ ಸದನದಲ್ಲಿ ನಿಂತು ಮಾತನಾಡುವುದೇ ನಿಮಗೆ ಸರಿ ಇದೆ. ಈ ಶಿಕ್ಷಣ ಸಂಸ್ಥೆಯ ಬಗ್ಗೆ ನಿರಂತರವಾಗಿ ಎರಡು ಮನೆಯಲ್ಲಿ ಚರ್ಚೆಯಾಗಿರುತ್ತದೆ. ಅದಕ್ಕೆ ನಾನು ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ. ತಾವು ಮಾತನಾಡುವಂಥ ಕಾಲದಲ್ಲಿ ಯಾವುದೇ ಸಂಸ್ಥೆಗಳು ಈ ದೇಣಿಗೆ ಕೊಟ್ಟ ಬಗ್ಗೆ ಯಾವುದಾದರೂ ಆರೋಪಗಳು ಇದ್ದರೆ ನಾನು ಏನಾದರೂ favouritism ಮಾಡಿದ್ದರೆ ಅದನ್ನು ತಿಳಿಸಿ ಎನ್ನುವ ಮಾತನ್ನು ಹೇಳಿದ್ದೇನೆ. ಇದು ಸಾರ್ವಜನಿಕರಿಗೆ ಸಂಬಂಧಪಟ್ಟಂಥ ಒಂದು ಟ್ರಸ್ಟ್, ಎಲ್ಲಕ್ಕಿಂತ P.E.S. ಎನ್ನುವ ಮಹಾಸಂಸ್ಥೆಯ ಅಧ್ಯಕ್ಷರೆ ಅದಕ್ಕೂ ಅಧ್ಯಕ್ಷರಾಗಿರುತ್ತಾರೆ. ನಾನು ಪದೆ ಪದೆ ಈ ಮನೆಯಲ್ಲಿ ತಮ್ಮಲ್ಲಿ request ಮಾಡಿಕೊಂಡಿದ್ದು ಏನಾದರೂ favourism ಮಾಡಿರುವುದಂಥದ್ದು ಇದ್ದರೆ ದಾಖಲೆ ಸಮೇತ ಇಲ್ಲಿ ಇಡಿ ಎಂದು ನಾನು request ಮಾಡಿರುತ್ತೇನೆ. ನಾನು ಬಂದ ಮೇಲೆ ಈ ಗಣಿಗಾರಿಕೆ ವಿಷಯದಲ್ಲಿ ಅಥವಾ ನೀವು ಮಾಡುತ್ತಿರುವ ಸಂಸ್ಥೆಗಳ ಮೇಲೆ ಬಹಳ ದೊಡ್ಡ ಪ್ರಮಾಣದಲ್ಲಿ ಕ್ರಮವನ್ನು

ತೆಗೆದುಕೊಂಡು 10 ವರ್ಷದಲ್ಲಿ 62 ಕೋಟಿ ರೂ.ಗಳು ಸಂಗ್ರಹವಾಗಿದ್ದರೆ ಒಂದೇ ವರ್ಷದಲ್ಲಿ 250 ಕೋಟಿ ರೂ.ಗಳನ್ನು ಸಂಗ್ರಹ ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಎರಡನೆಯದಾಗಿ ಆ ಮನೆಯಲ್ಲಿಯೂ ಹೇಳಿದ್ದೇನೆ ಇಲ್ಲಿಯೂ ಹೇಳುತ್ತೇನೆ. ಯಾವ ಜಿಂದಾಲದಂಥ ಸಂಸ್ಥೆಗಳು ಕಾಲದಲ್ಲಿ ಇಲ್ಲಿ ಬಂದು ದೊಡ್ಡ ಪ್ರಮಾಣದಲ್ಲಿ investment ಮಾಡಿ ಆ ಕಬ್ಬಿಣದ ಅದಿರಿಗೆ ಬೆಲೆ ಇಲ್ಲದಂಥ ಕಾಲದಲ್ಲಿ ಇಲ್ಲಿ ಒಂದು ದೊಡ್ಡ ಸಂಸ್ಥೆಯನ್ನು ಕಟ್ಟಿದರು. ಅವರೊಬ್ಬರೆ ಅಲ್ಲ, ಯಾರ್ಯಾರು Steel Industries ಅನ್ನು ಮಾಡಿದ್ದಾರೆ ಒಬ್ಬರಿಗೂ ಗಣಿಗಾರಿಕೆಗೆ ಅವಕಾಶ ಮಾಡಿಕೊಡದೆ, ಯಾರು ಅವತ್ತು ಆಡಳಿತದಲ್ಲಿದ್ದಂತಹವರಿಗೆ favour ಮಾಡುತ್ತಿದ್ದರೋ ರಾಜ್ಯ ಮತ್ತು ಕೇಂದ್ರದಲ್ಲಿ influence ಇತ್ತೋ ಅಂತಹವರಿಗೆ ಅನುಮತಿಯನ್ನು ಕೊಡುವಂತಹ ಪ್ರಯತ್ನದಲ್ಲಿ ನೀವು ಯಶಸ್ವಿಯಾಗಿದ್ದೀರಿ. ನಾನು ಈ ಮನೆಯಲ್ಲಿ ಹೇಳುತ್ತಿದ್ದೇನೆ. Value Added ಗೋಸ್ಕರ ಮಾತ್ರ ನಾವು permission ಕೊಡುತ್ತೇವೆ. ಅಂತಹವರಿಗೆ ಮಾತ್ರ ಗಣಿಗಾರಿಕೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇವೆಂದು ಹೇಳುವಂತಹ ಮೊದಲನೆಯ ಸರ್ಕಾರ ಬಿಜೆಪಿಯ ಈ ಸರ್ಕಾರ. ಇದು ರಾಷ್ಟ್ರಮಟ್ಟದಲ್ಲಿ ಎಲ್ಲಾ ಕಡೆಯಲ್ಲಿಯೂ ಚರ್ಚೆಯಾಗುತ್ತಿದೆ. ಹೈಕೋರ್ಟು ಮತ್ತು ಸುಪ್ರೀಂಕೋರ್ಟಿನಲ್ಲಿಯೂ ಚರ್ಚೆಯಾಗುತ್ತಿದೆ ಇನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈಗ ನಾನು ತೀರ್ಮಾನವನ್ನು ಮಾಡಿದ್ದೇನೆ. ಯಾರ್ಯಾರು Steel Industries ಗಳನ್ನು ಮಾಡಿದ್ದರೋ ಅದು Governmentಗೆ ಸಂಬಂಧಿಸಿದ ಅನೇಕ ಸಂಸ್ಥೆಗಳು ಇವೆ, ಯಾರೊಬ್ಬರಿಗೂ ನೀವು ಸಹ ಗಣಿಗಾರಿಕೆಗೆ ಅವಕಾಶವನ್ನು ಕೊಡಲಿಲ್ಲ. ನಮ್ಮ ಸರ್ಕಾರವು ತೀರ್ಮಾನವನ್ನು ಮಾಡಿದೆ, ಈ ಗಣಿಗಾರಿಕೆಗೆ ಅನುಮತಿಯನ್ನು ಯಾರಿಗೆ ಯಾವುದಕ್ಕೆ invest ಮಾಡಿ Steel Industriesಗಳನ್ನು ಹಾಕಿದ್ದಾರೆ ಅವರಿಗೆ ಆದ್ಯತೆಯೇ ಹೊರತು ಯಾವುದೋ ರಾಜಕೀಯ influence ಇದ್ದು export ಮಾಡಿ ಲೂಟಿ ಮಾಡುವಂತಹರಿಗಲ್ಲ ಎನ್ನುವಂತಹ ತೀರ್ಮಾನಕ್ಕೆ ನಾನು ಬಂದಿದ್ದೇನೆ ಅದನ್ನು ನಾನು ಜಾರಿಗೆ ತರುವವನಿದ್ದೇನೆ. ಇಂತಹ ಸಂದರ್ಭದಲ್ಲಿ ನಾನು ಪ್ರತಿಪಕ್ಷದ ನಾಯಕರಿಗೆ ತಾವು ಅನೇಕ ಬಾರಿ ನನ್ನ

ಮೇಲೆ ಆರೋಪವನ್ನು ಮಾಡುವಂತಹ ಪ್ರಯತ್ನವನ್ನು ಮಾಡಿದ್ದೀರಿ. ಒಂದು ವಿಷಯವಲ್ಲ, G-categoryಗೆ ಕೊಟ್ಟಂತಹ ಸೈಟ್ ಇರಬಹುದು, ಅಥವಾ Industiresಗೆ ಕೊಟ್ಟಂತಹ 2-2 ಎಕರೆ ಜಮೀನು ಇರಬಹುದು ಇವೆಲ್ಲದರ ಬಗ್ಗೆ ತಾವು ಆರೋಪವನ್ನು ಮಾಡಿದ್ದೀರಿ, ನಾನು ಅದೆಲ್ಲವನ್ನು surrnder ಮಾಡಿದ್ದೇನೆ. ನಾನು ಈ ಸದನದ ಮುಖಾಂತರ ಗೌರವಾನ್ವಿತ ಸದಸ್ಯರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ತಮ್ಮ ತಮ್ಮ ಮುಖ್ಯಮಂತ್ರಿಗಳು ಇದ್ದ ಕಾಲದಲ್ಲಿ ಈ ರೀತಿಯ ಕೈಗಾರಿಕೆಗಳಿಗೆ ಜಮೀನುಗಳನ್ನು ಕೊಟ್ಟರು, G-Category ಅಡಿಯಲ್ಲಿ ಸೈಟನ್ನು ಕೊಟ್ಟರು, ಅದನ್ನು ತಾವುಗಳು withdraw ಮಾಡಿಕೊಳ್ಳುವುದಕ್ಕೆ ready ಇದ್ದೀರಾ ? ನಿನ್ನೆ ತಾನೇ ಇವತ್ತು ಪ್ರಮುಖವಾದ ಸುದ್ದಿ ಪತ್ರಿಕೆಯಲ್ಲಿ ಸುದ್ದಿ ಬಂದಿದೆ. ಅವತ್ತು ಲೋಕಾಯುಕ್ತದವರು ಮಾಡಿರುವಂತಹ ಆರೋಪ 23 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಬೇಕೆನ್ನುವುದು, ಈಗ ಮತ್ತೆ ಅದು ತನಿಖೆಗೆ ಬಂದು ವಸೂಲಿ ಮಾಡಬೇಕೆನ್ನುವ ಮಟ್ಟಕ್ಕೆ ಬಂದಿರುವುದು ಗೊತ್ತಿದೆ. ಇಂತಹ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರೆ ತಾವು ನನ್ನ ಮಾತನ್ನು ಕೇಳುವ ಅಗತ್ಯವಿಲ್ಲ. ಹಳದಿ ಕಣ್ಣಿನವರಿಗೆ, ಕನ್ನಡಕ ಹಾಕಿಕೊಂಡವರಿಗೆ ಎಲ್ಲವೂ ಹಳದಿ ಕಾಣುತ್ತದೆ. ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದಂದಿನಿಂದ ನೀವು ವಿಶ್ವಪ್ರಯತ್ನವನ್ನು ಮಾಡಿದರೂ ಕೂಡ ನನ್ನನ್ನು ಅಲ್ಲಾಡಿಸುವುದಕ್ಕಾಗಲಿಲ್ಲ, ಈ ಸರ್ಕಾರವನ್ನು ಅಲ್ಲಾಡಿಸಿಲ್ಲ. ಆದ್ದರಿಂದ ನಿಮಗೆ "ಜನತಾ ಜರ್ನಾರ್ದನ" ತೀರ್ಮಾನ ಮಾಡಬೇಕು. ನೀವು ಆರೋಪವನ್ನು ಮಾಡಿದ್ದೀರಿ, ನಾನು ಉತ್ತರವನ್ನು ಕೊಟ್ಟಿದ್ದೇನೆ. ಇಲ್ಲಿ ಯಾವುದೇ ತನಿಖೆಗೆ ಅಗತ್ಯವಿಲ್ಲ, ಮಾಡುವುದಿಲ್ಲ, ತನಿಖೆಯನ್ನು ಮಾಡಿಸುವುದಿಲ್ಲ. ನಿಮಗೆ demand ಮಾಡುವುದಕ್ಕೆ ಅಧಿಕಾರವಿದೆ. ಉತ್ತರ ಕೊಡುವುದಕ್ಕೆ ನಿಲುವನ್ನು ಪ್ರಕಟ ಮಾಡುವುದಕ್ಕೆ ಮಮಗೆ ಅಧಿಕಾರವಿದೆ. ನಾನು ಹೇಳುತ್ತಿದ್ದೇನೆ, ಏನು ಅವ್ಯವಹಾರ ನಡೆದಿಲ್ಲ, ನೀವು ವಿನಾಕಾರಣ ಧರಣಾ ಕುಳಿತು ಪ್ರಚಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೀರಿ, ಅದರಿಂದ ಜನರನ್ನು ಮೆಚ್ಚಿಸುವುದಕ್ಕಾಗುವುದಿಲ್ಲ. ಅದರ ಬದಲು ನೀವೆಲ್ಲಾ ಶಾಸಕರುಗಳು ಏನು ಸವಲತ್ತುಗಳು ಬೇಕು ಅದನ್ನು ತೆಗೆದುಕೊಂಡು ನಿಮ್ಮ ನಿಮ್ಮ ಕ್ಷೇತ್ರಗಳಿಗೆ ಹೋಗಿ ಅಭಿವೃದ್ಧಿ ಕಾರ್ಯಗಳಿಗೆ

ಗಮನವನ್ನು ಕೊಟ್ಟು ಇನ್ನು ಎರಡೂಮುಕ್ಕಾಲು ವರ್ಷ ಆದ ಮೇಲೆ ಚುನಾವಣೆ ಬರುತ್ತದೆ, ಜನತೆ ಜನಾರ್ಧನ ಅವತ್ತು ತೀರ್ಮಾನ ಮಾಡುತ್ತಾನೆ. ಅದರಿಂದ ಯಡಿಯೂರಪ್ಪನನ್ನು ಅಲ್ಲಾಡಿಸಬಹುದು, ಜನರಿಗೆ ಒಂದು ಕೆಟ್ಟ ಅಭಿಪ್ರಾಯವನ್ನು ಮೂಡಿಸಬಹುದು ಅಥವಾ ಯಾವುದೋ ಒಂದು ಕೋಮಿನ ದೃಷ್ಟಿಯಲ್ಲಿಟ್ಟುಕೊಂಡು ಆರೋಪದ ಮೇಲೆ ಆರೋಪವನ್ನು ಮಾಡಿ ಏನಾದರೂ ಮಾಡಬಹುದು ಎಂಬ ಭ್ರಮೆಯಲ್ಲಿ ನೀವಿದ್ದರೆ ಈ ಕನಸು ನನಸಾಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾನು ಯಾವುದೇ ತನಿಖೆಯನ್ನು ಮಾಡಿಸುವುದಿಲ್ಲ, Becasue ಇದು ಒಂದು ಹುರುಳಿಲ್ಲದ ಆರೋಪ ನೀವು ಪ್ರಚಾರಕ್ಕಾಗಿ ಮಾಡಿರುತ್ತೀರಿ. ಯಾವುದೇ ತನಿಖೆಯನ್ನು ಮಾಡಿಸುವುದಿಲ್ಲ. ಆದ್ದರಿಂದ ಈ ಬಗ್ಗೆ ದಯಮಾಡಿ ಇದನ್ನು ಮುಗಿಸಿ ಮುಂದಿನ ಕಾರ್ಯಕಲಾಪವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಪ್ರತಿಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ನೀವು ವಿರೋಧ ಪಕ್ಷದಲ್ಲಿದ್ದೀರಿ, ನಾನು ವಿರೋಧ ಪಕ್ಷದಲ್ಲಿದ್ದೆ, ನಾನು ಹೋರಾಟವನ್ನು ಮಾಡಿದ್ದೇನೆ, ಧರಣಾ ಮಾಡಿದ್ದೇನೆ ವಾಕ್‌ಔಟ್ ಮಾಡಿದ್ದೇನೆ, ಸತ್ಯಾಗ್ರಹವನ್ನು ಮಾಡಿದ್ದೇನೆ. ಜನರ ಮುಂದೆ ಚಳುವಳಿ ಮಾಡುವುದಕ್ಕೆ ಹೋಗಿದ್ದೇನೆ. ಬನ್ನಿ, ನೀವು ಗಣಿಗಾರಿಕೆಯ ವಿಷಯದಲ್ಲಿ ಪಾದಯಾತ್ರೆ ಮಾಡಿದ್ದೀರಿ, ನಾವು ನಿಮ್ಮನ್ನು ಟೀಕೆ ಮಾಡಲಿಲ್ಲ, ಹಾಗೆಯೇ ಇವತ್ತು ಯಡಿಯೂರಪ್ಪನವರ ವಿರುದ್ಧ ಇನ್ನೊಂದು ಪಾದಯಾತ್ರೆಯನ್ನು ಮಾಡಿ opportunity ಯನ್ನು ಏತಕ್ಕಾಗಿ ಕಳೆದುಕೊಳ್ಳುತ್ತೀರಿ. So, ಆದ್ದರಿಂದ ನಮ್ಮ ಶಿವಕುಮಾರ್‌ರವರು ದೊಡ್ಡ Education Institutions ಅನ್ನು ನಡೆಸುತ್ತಿದ್ದಾರೆ. ಶ್ರೀ ಚೆನ್ನಿಗಪ್ಪನವರು ನಡೆಸುತ್ತಿದ್ದಾರೆ. ಬೇಕಾದಷ್ಟು ಜನರು ನಡೆಸುತ್ತಿದ್ದಾರೆ. ನಾವು ಯಾವುದನ್ನು ಪ್ರಸ್ತಾಪ ಮಾಡಲಿಲ್ಲ. ನಾವು ಯಾರ ಮೇಲೂ ಆರೋಪವನ್ನು ಮಾಡಲಿಲ್ಲ. ಆರೋಪವನ್ನು ಮಾಡಿಲ್ಲವೆಂದೆ, ನೀವು ನಿಮ್ಮ ಸ್ನೇಹಿತರುಗಳ ಬಗ್ಗೆ ಮಾತನಾಡಿ. ಶಿವಕುಮಾರ್‌ರವರೇ, ನೀವು ಇಂತಹ ಸಮಯದಲ್ಲಿ ಹೊರ ದೇಶಕ್ಕೆ ಹೊರಟು ಹೋಗಿದ್ದೀರಿ, ತಾವು ಎಲ್ಲಿ ಬರದೇ ಹೋಗುತ್ತೀರೋ ಎಂದಾಗಿತ್ತು. ನೀವು ಕೊನೆಯ ಪಕ್ಷ ಬಂದಿದ್ದೀರಿ. You know very well about these eduction institutions better than anybody else. ಅದಕೋಸ್ಕರ ನೀವು ಬಂದಿರುವುದು ಬಹಳ ಒಳ್ಳೆಯದಾಯಿತು. ಯಾವುದೇ ಆರೋಪಗಳು ಇಲ್ಲದಿರುವ ಬಗ್ಗೆ ನಾನು

ಯಾವುದೇ ರೀತಿಯ ಮಾನ್ಯ ಶಿವಕುಮಾರ್‌ರವರೆ, ನಿಮ್ಮ ಬಗ್ಗೆ ನಮಗೆ ಗೌರವವಿದೆ, ಅದೇನೋ ತಿನ್ನುತ್ತಿದ್ದೀರಿ, ಆಮೇಲೆ ತಿನ್ನೋಣ. ಅವರು ಇನ್ನೇನು ತಿನ್ನುತ್ತಿಲ್ಲ, ಲವಂಗವನ್ನು ತಿನ್ನುತ್ತಿದ್ದಾರೆ. ಅವರು ಹೊರದೇಶಕ್ಕೆ ಹೋಗಿ ಬಂದು ರಾತ್ರಿ ನಿದ್ದೆಗೆಟ್ಟು ಬಂದಿದ್ದಾರೆ. ಅದರಿಂದ ಪಾಪ ಅವರು ಸುಧಾರಿಸಿಕೊಳ್ಳುತ್ತಿದ್ದಾರೆ. ಆಮೇಲೆ ಈ ಶಿಕ್ಷಣ ಸಂಸ್ಥೆಗಳ ಬಗ್ಗೆ ನೀವು ಬೇರೆ ಸಂದರ್ಭದಲ್ಲಿ ಇನ್ನು ಹೆಚ್ಚು ಬೆಳಕನ್ನು ಚೆಲ್ಲಬೇಕೆಂದು ಹೇಳಿ ಸನ್ಮಾನ್ಯ ಅಧ್ಯಕ್ಷರೆ, ಇದನ್ನು ಇಲ್ಲಿಗೆ ಕೊನೆ ಮಾಡಿ ದಯಮಾಡಿ ಬೇರೆ ಕಾರ್ಯಕಲಾಪಗಳನ್ನು ಅವಕಾಶವನ್ನು ಮಾಡಿಕೊಡಬೇಕು. ಯಾವ ಕಾರಣಕ್ಕೂ ಯಾವುದೇ ತನಿಖೆಗೆ ನಾನು ಅವಕಾಶವನ್ನು ಮಾಡಿಕೊಡುವುದಿಲ್ಲ. ಇದು baseless ಆರೋಪಗಳು ನಿಮ್ಮದು ಇದೆ. ಅನೇಕ ಜನರು ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಎಲ್ಲರೂ ಸಹಾಯವನ್ನೇ ತೆಗೆದುಕೊಂಡೆ ಮಾಡುತ್ತಿದ್ದಾರೆ. ಅವರ ಅಪ್ಪಅಮ್ಮ ದುಡಿದು ಬೆವರು ಸುರಿಸಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿಲ್ಲ. ಆದರೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂಬ ಸದ್ಭಾವನೆ ರಾಜ್ಯದ ಜನರಲ್ಲಿ ಇದೆ, ಶಿವಮೊಗ್ಗ ಜಿಲ್ಲೆಯ ಜನತೆಯಲ್ಲಿದೆ. ಅದನ್ನು ಸಹಿಸುವುದಕ್ಕಾಗದೆಯೇ ಬಣ್ಣವನ್ನು ಕಟ್ಟುವುದಕ್ಕೆ ಹೊರಟಿದ್ದೀರಿ, ಮಾನ್ಯ ಸಿದ್ದರಾಮಣ್ಣನವರೇ, ಇದರಿಂದ ನೀವು ಏನು ಯಶಸ್ಸು ಆಗುವುದಿಲ್ಲ. ಈಗಲಾದರೂ ನೀವು ಬಹಳ ಜವಾಬ್ದಾರಿ ಸ್ಥಾನದಲ್ಲಿದ್ದೀರಿ, ವಿರೋಧಪಕ್ಷ, ಆಡಳಿತಪಕ್ಷದಲ್ಲಿ ಕುಳಿತವರು, ನೀವು ಹೋರಾಟವನ್ನು ಮಾಡಿದ್ದೀರಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೀರಿ, ವಿರೋಧ ಪಕ್ಷದಲ್ಲಿದ್ದುಕೊಂಡು demand ಮಾಡುವುದಕ್ಕೆ ನಿಮಗೆ ಸ್ವಾತಂತ್ರವಿದೆ. ಇದು ಹುರುಳಿಲ್ಲದ ಆರೋಪವೆಂದು ನಾನು ಹೇಳುತ್ತಿದ್ದೇನೆ. ಆದ್ದರಿಂದ ಯಾವುದೇ ತನಿಖೆಯ ಅಗತ್ಯವಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರಾದ ಬಾಲಕೃಷ್ಣರವರಿಗೆ ಏನೇನು ನಡೆದಿದೆ, ಚೆನ್ನಾಗಿ ಗೊತ್ತಿದೆ. ನೀವು ಬಹಳ ಸ್ನೇಹಿತರು ಆ ಕುಟುಂಬಕ್ಕೆ. ಆದ್ದರಿಂದ ನಾನೇನು ಚರ್ಚೆಯನ್ನು ಮಾಡುವುದಿಲ್ಲ. ಮಾಡಬೇಕೆಂದರೆ ಚರ್ಚೆಯನ್ನು ಮಾಡೋಣ. ಮಾನ್ಯ ಬಾಲಕೃಷ್ಣರವರೆ ಬಹಳಷ್ಟು ವಿಷಯಗಳ ಬಗ್ಗೆ ಚರ್ಚೆ ಮಾಡೋಣ. ಆದ್ದರಿಂದ ಯಾರು ಈ ಸರ್ಕಾರದ ಖಜಾನೆಯನ್ನು ಲೂಟಿ ಮಾಡಿ, ಹಗಲು ದರೋಡೆಯನ್ನು ಮಾಡುವಂತಹ ಪ್ರಯತ್ನ ಮಾಡಿರುವಂತಹವರನ್ನು ಜನರು

reject ಮಾಡಿದ್ದಾರೋ ನಿಮ್ಮಿಂದ ನಾನು ಉಪದೇಶದ ಮಾತನ್ನು ಕೇಳುವ ಅಗತ್ಯವಿಲ್ಲ. ಈ ಬಗ್ಗೆ ಜನರು ತೀರ್ಮಾನವನ್ನು ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ...

ಶ್ರೀ ಆರ್.ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ನಿನ್ನೆಯಿಂದ ವೆಲ್‌ನಲ್ಲಿ ಇದ್ದಾರೆ. ಅವರಲ್ಲಿ ಎಷ್ಟೇ ವಿನಂತಿಯನ್ನು ಮಾಡಿದರೂ ಕೂಡ ಅವರು ವೆಲ್‌ನಿಂದ ಆಚೆಗೆ ಬರುವ ಮಟ್ಟ ಕಾಣಿಸುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಮೇಲೆ ನೀವೇನು ಮಾತನಾಡುತ್ತೀರಿ. ತಾವು ಕುಳಿತುಕೊಳ್ಳಿ. ಆಯಿತು.

ಶ್ರೀ ಆರ್.ಅಶೋಕ್ : ಬಿಲ್ ಅನ್ನು ತೆಗೆದುಕೊಳ್ಳುವುದಕ್ಕಾ ಅವಕಾಶವನ್ನು ಮಾಡಿಕೊಡಿ. ಅಧಿವೇಶನವು ನಡೆಯುವುದು ಬಿಲ್‌ಗಳು, ಈ ತರಹದ question hours ಇದೆ. ಏನು ಅವಕಾಶವಿಲ್ಲ.

ಶ್ರೀ ಸಿದ್ದರಾಮಯ್ಯ : ಅವರ ಮೇಲೆ criminal case ಇದೆ.

ಶ್ರೀ ಆರ್.ಅಶೋಕ್ : ದಯವಿಟ್ಟು ಅವಕಾಶವನ್ನು ಮಾಡಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ರಾಹುಕಾಲ ಕಳೆದ ಮೇಲೆ ಸಿದ್ದರಾಮಣ್ಣನವರನ್ನು ಕೊಠಡಿಗೆ ಕರೆಸಿ ಅಲ್ಲಿ ಚರ್ಚೆ ಮಾಡಿ ಮತ್ತೊಮ್ಮೆ ಸಭೆಯನ್ನು ಸೇರೋಣ. ಅವರಿಗೆ ಭಗವಂತನು ಸದ್ಬುದ್ಧಿಯನ್ನು ಕೊಟ್ಟರೆ ಅಧಿವೇಶನವನ್ನು ನಡೆಸೋಣ ಬೇಡ ಯಡಿಯೂರಪ್ಪನವರೆ ಎಂದು ಅವರ ಮನಸ್ಸಿನಲ್ಲಿದ್ದರೆ ಅದಕ್ಕೆ ಬಿಲ್ ಅನ್ನು ಪಾಸ್ ಮಾಡಿಕೊಂಡು ಮುಂದಕ್ಕೆ ಹೋಗುತ್ತೇವೆ. ನಾವು ಮುಂದೆ ಹೋಗೋಣ, ಅವರ intention ಅದು ಇದೆ. ಇಲ್ಲಿ ಏನು ವಿಷಯ ಇಲ್ಲ ಚರ್ಚೆ ಮಾಡುವುದಕ್ಕೆ., ಅಧಿವೇಶನ ನಡೆಸುವುದಕ್ಕೆ ನಿಮಗೆ ಇಷ್ಟವಿಲ್ಲ. ಯಾವುದೋ ಒಂದು ವಿಷಯ ಇಟ್ಟುಕೊಂಡು ಅದರ ಬಗ್ಗೆ ದಿನಗಟ್ಟಲೆ ಕಾಲಹರಣವನ್ನು ಮಾಡುವುದು ಸರಿಯಲ್ಲ ಸಿದ್ದರಾಮಣ್ಣ, ನೀವು ಬಹಳ ಹಿರಿಯರು ಇದ್ದೀರಿ, ನಿಮಗೆ ಜವಾಬ್ದಾರಿ ಇರುವಂತವರಾಗಿದ್ದೀರಿ, ಅವರ ಜೊತೆಯಲ್ಲಿ ಸೇರಿ

ನೀವ್ಯಾಕೆ ಹೀಗೆ ಆದೀರಿ ನನಗೆ ಗೊತ್ತಿಲ್ಲ. ನೀವು ಏನು ಹೇಳಬೇಕೋ ಎಲ್ಲವನ್ನು ಹೇಳಿದ್ದೀರಿ, ಮತ್ತೊಮ್ಮೆ ಏತಕ್ಕೆ ಹೇಳುತ್ತೀರೋ ನನಗೆ ಗೊತ್ತಿಲ್ಲ.

ಡಾ : ಹೆಚ್.ಸಿ. ಮಹದೇವಪ್ಪ : ರಾಹುಕಾಲ, ಗುಳಿಕಕಾಲ, ಯಮಗಂಡಕಾಲ ಇದನ್ನು ಹೇಳಿದರೆ ಸಂವಿಧಾನಕ್ಕೆ ಅಪಚಾರ ಮಾಡಿದಂತಾಗುತ್ತದೆ. ಅದಕ್ಕೆ ವಿಶೇಷವಾದಂತಹ ತನಿಖೆಯನ್ನು ಮಾಡಿ.

ಅಧ್ಯಕ್ಷರು : ನೀವು ಯಾವ ಕಾಲವನ್ನು ನಂಬುತ್ತೀರಿ ? ನಿಮ್ಮ ಅಧ್ಯಕ್ಷತೆಯಲ್ಲಿಯೇ ಮಾಡೋಣ.

ಡಾ :ಹೆಚ್.ಸಿ. ಮಹದೇವಪ್ಪ : ಮಾಡಿ

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, first of all ನಮಗೆ ರಾಹುಕಾಲ, ಗುಳಿಕಕಾಲ, ಯಮಗಂಡ ಕಾಲದಲ್ಲಿ ನಂಬಿಕೆ ಇಲ್ಲ. I making it very clear. ಎಲ್ಲಾ ಕಾಲಗಳು ಒಂದೆ, ಎಲ್ಲಾ ಕಾಲದ ಮಹತ್ವವು ಒಂದೇ, ಆದ್ದರಿಂದ ಅದರ ಮೇಲೆ ನಮಗೆ ನಂಬಿಕೆ ಇಲ್ಲ. ಇನ್ನು ಎರಡನೆಯದಾಗಿ ಹೇಳುವುದಾದರೆ, ಮಾನ್ಯ ಯಡಿಯೂರಪ್ಪನವರು ; ಹುರುಳಿಲ್ಲದ ಆರೋಪಗಳನ್ನು ಮಾಡಿದ್ದಾರೆ, ಅದರಿಂದ ನಾನು ಯಾವುದೇ ತನಿಖೆಗೆ ತಯಾರಿಲ್ಲ ಎಂದು ಹೇಳಿದರು. ನಾನು ಸಿಬಿಐ ತನಿಖೆಯನ್ನು ಬಿಟ್ಟು ಯಾವ ತನಿಖೆಗಾದರೂ ತಯಾರಾಗಿದ್ದೇನೆ ಎಂದು ಮೊನ್ನೆ ತಾನೇ ಹೇಳಿದರು. ನಾನು ಯಾವುದೇ ತನಿಖೆಗೆ ತಯಾರಿಲ್ಲವೆಂದು ಇವತ್ತು ಹೇಳುತ್ತಿದ್ದಾರೆ. ಸರ್ಕಾರವು ಮೊಂಡುತನದ ಪರಮಾವಧಿಯನ್ನು ಪ್ರದರ್ಶನ ಮಾಡುತ್ತಿದ್ದಾರೆ. ಮೊಂಡುತನ, ಬಂಡತನ ಇವೆರಡು ಬೇರೆ ಬೇರೆ ಪದಗಳು. ಮೊಂಡುತನ, ಬಂಡತನ ಇವೆರಡು ಅನ್ವಯವಾಗುತ್ತದೆ. ಇವೆರಡನ್ನು ಸರ್ಕಾರವು ಮೈಗೂಡಿಸಿಕೊಂಡರೆ ನಾವು ಏನೇ ಆರೋಪಗಳನ್ನು ಮಾಡಿದರೂ ಕೂಡ, ಏನೇ ದಾಖಲಾತಿಯನ್ನು ಕೊಟ್ಟರೂ ಕೂಡ ಎಷ್ಟರ ಮಟ್ಟಿಗೆ ನಾವು ಸಾಬೀತು ಮಾಡಿದರೂ ಕೂಡ ಅವರು ಎಲ್ಲದಕ್ಕೂ ಇದೇ ರೀತಿಯ ಉತ್ತರವನ್ನು ಕೊಟ್ಟುಕೊಂಡು ಇರುತ್ತಾರೆ. ಇಲ್ಲಿ ನಾವು ಕೇವಲ ಆರೋಪಗಳನ್ನು ಮಾಡುವುದಕೋಸ್ಕರ ಮಾಡಿರುವುದಿಲ್ಲ. ನಮ್ಮ ವಾದವು ಮೊದಲಿನಿಂದಲೂ ಕೂಡ ನೀವು ವಿದ್ಯಾಸಂಸ್ಥೆಯನ್ನು ಏತಕ್ಕಾಗಿ ಮಾಡಿದ್ದೀರಿ ಎನ್ನುವಂತಹ ವಾದ ನಮ್ಮದು ಇಲ್ಲ. ನೀವು ಮಾಡಿರುವ ತಪ್ಪು ಅಂತ ನಮ್ಮ ವಾದವಿಲ್ಲ. ಇನ್ನು ಎರಡನೆಯದು ನೀವು

ವಂತಿಗೆಯನ್ನು ತೆಗೆದುಕೊಂಡು ದುರುಪಯೋಗ ಮಾಡಿಕೊಂಡಿದ್ದೀರಿ ಅದು ನಮ್ಮ ವಾದವಲ್ಲ. ಇನ್ನು ಮೂರನೆಯದಾಗಿ ನೀವು ಸದುಪಯೋಗ ಮಾಡಿಕೊಂಡಿದ್ದೀರೋ ಅಥವಾ ದುರುಪಯೋಗ ಮಾಡಿಕೊಂಡಿದ್ದೀರೋ ಅದು ತನಿಖೆಯಾಗಬೇಕೆನ್ನುವುದು ನಮ್ಮ ವಾದವಲ್ಲ. ಇಲ್ಲಿ ನಮ್ಮ ವಾದ ಇರುವುದು, ಒಂದು ಮೈನಿಂಗ್ ಕಂಪನಿ South West Mining company ... ನೀವು ಹೇಳಿರುವಂತೆ ಹೇಳಿರುವುದು ಇಲ್ಲಿಯವರೆಗೆ .... ಏನಾದರೂ ಹೊಸದಾಗಿ ಬೇರೆ ಹೇಳಿದ್ದೀರಾ ? South West Mining Company ಏನು ಅದನ್ನು ಹೇಳಿದ ತಕ್ಷಣವೇ ಇವರಿಗೆ ಕೋಪ ಬಂದುಬಿಡುತ್ತದೆ. ಆ ಕಂಪನಿಯು ಇವರ ಪ್ರೇರಣಾ ವಿದ್ಯಾಸಂಸ್ಥೆಗೆ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದಲ್ಲದೇ ಪ್ರೇರಣಾ ಸಂಸ್ಥೆ ಅಲ್ಲದೆಯೇ ಆ South West Mining Companyಯವರು ಬೇರೆ ಯಾವ ಯಾವ Education Institutionsಗಳಿಗೆ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಒಂದು ಪಟ್ಟಿಯನ್ನು ಕೊಡಲಿ ನೋಡೋಣ. ಹೊಸಪೇಟೆ ಬಳ್ಳಾರಿಯಲ್ಲಿ ಒಂದು Education Insitutionsಗೆ ಒಂದು ರೂಪಾಯಿಯನ್ನು ಅವರು ಕೊಟ್ಟಿದ್ದಾರೆಯೇ ? ಅವನು ಏನು ಬಹಳ "ದಾನ ಶೂರ ಕರ್ಣರೇನು" ಅಲ್ಲ No.1.

number two ಹಾಗಾದರೆ ಏಕೆ ಡೊನೇಷನ್ ಅನ್ನು ಕೊಟ್ಟರು ? ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾರೆ. ಅವರು ಮಕ್ಕಳು ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರ ಮಕ್ಕಳು. ಅವರು ಈ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಶ್ರೀ ದೊರೆಸ್ವಾಮಿ ನಾಯ್ಡು ಸುಮ್ಮನೆ ಅಲ್ಲಿ ನಾಮಕಾವಸ್ಥೆ ಅಧ್ಯಕ್ಷರು ಅಷ್ಟೆ. ಅಲ್ಲಿ Managing Trustee ಆಗಿರುವವರು ರಾಘವೇಂದ್ರ, Treasurer ಇವರ ಇನ್ನೊಬ್ಬ ಮಗ ವಿಜಯೇಂದ್ರ ಇರಬೇಕು. ಆದರೆ ಇದನ್ನು ಯಡಿಯೂರಪ್ಪನವರ ಸಂಸ್ಥೆ ಎಂದು ಹೇಳಬಹುದು. ಯಡಿಯೂರಪ್ಪನವರು ಅದು ನಮ್ಮದಲ್ಲ ಅಂದರೆ ಅವರ ಮಕ್ಕಳ ಸಂಸ್ಥೆ. ಅವರ ಮಕ್ಕಳ ಸಂಸ್ಥೆಗೆ ಇವರು ಏಕೆ ಕೊಟ್ಟರು ? ಯಾರಿಗಾದರೂ ನೋಡಿದವರಿಗೆ ಏನು ಅನ್ನಿಸುತ್ತದೆ ? ಇವರಿಗೆ ಸರ್ಕಾರದಿಂದ ಏನೋ ಸಹಾಯ ಆಗಿದೆ, ಅದಕ್ಕೋಸ್ಕರ ಕೊಟ್ಟಿದ್ದಾರೆ. ಈಗ ಜನರಲ್ಲಿ ಈ ಅನುಮಾನ ಬಹಳ ಗಟ್ಟಿಯಾಗಿಬಿಟ್ಟಿದೆ ಯಡಿಯೂರಪ್ಪನವರೇ. ರಾಜ್ಯದ ತುಂಬಾ ಜನರೆಲ್ಲಾ ಚರ್ಚೆ ಮಾಡುತ್ತಿದ್ದಾರೆ. ಯಡಿಯೂರಪ್ಪನವರು

ಅಸೆಂಬ್ಲಿಯಲ್ಲಿ ಏನೇ ಉತ್ತರ ಕೊಟ್ಟರೂ ಇದನ್ನು ಮಾಡಿರುವುದು ಸರಿಯಲ್ಲ. ಡೊನೇಷನ್ ರೂಪದಲ್ಲಿ illegal contribution ಅನ್ನು ತೆಗೆದುಕೊಂಡಿದ್ದಾರೆ ಅದು ತಪ್ಪು ಎನ್ನುವುದನ್ನು ಇಲ್ಲಿ ಜನ ರಾಜ್ಯದ ತುಂಬಾ ಚರ್ಚೆ ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಆಗಬೇಕೋ ಬೇಡವೇ ? ಹುರುಳಿಲ್ಲ ಅಂದ ಮೇಲೆ why you are afraid of it? ಇದರಲ್ಲಿ ಹುರುಳಿಲ್ಲವೆಂದ ಮೇಲೆ ಸಿ.ಬಿ.ಐ.ಗೆ ಏಕೆ ಹೆದರಿಕೊಳ್ಳುತ್ತಿದ್ದೀರಿ. ಇವರೆಲ್ಲಾ ಸದುಪಯೋಗ ಮಾಡಿಕೊಂಡಿದ್ದಾರೆ. ಅವರು ಪಾಪ ಇವರಿಗೆ ಪ್ರಾಮಾಣಿಕವಾಗಿ ದೇಣಿಗೆಯನ್ನು ಕೊಟ್ಟಿದ್ದಾರೆ. ಇವರಿಂದ ಪ್ರತಿಫಲವನ್ನೇನು ಪಡೆದುಕೊಂಡಿಲ್ಲ ಅನ್ನುವುದಾದರೆ Why you are afraid of it ? ಮಾಡಿ. ಒಂದು ವೇಳೆ ಬೇರೆಯವರು ಯಾರಾದರೂ ಮಾಡಿದ್ದರೆ, ಬೇರೆ Education Institutions ಹೀಗೆ ಮಾಡಿದ್ದರೆ ಅಥವಾ ಅಧಿಕಾರದಲ್ಲಿದ್ದಾಗ ಬೇರೆಯವರು ಈ ರೀತಿ ಮಾಡಿದ್ದರೆ ಅದನ್ನು ಕೊಟ್ಟುಬಿಡಿ. ಯಾರ್ಯಾರು ಇದ್ದಾರೆ ಅವರದ್ದನ್ನೆಲ್ಲಾ ಸೇರಿಸಿ ಕೊಟ್ಟುಬಿಡಿ. ಶ್ರೀ ಡಿ.ಕೆ. ಶಿವಕುಮಾರ್‌ರವರದ್ದು ಇದ್ದರೆ ಪಾಪ ಅವರದ್ದು ಕೊಡಿ. ಈಗಲೇ ಅವರು ರೆಡಿಯಿದ್ದಾರೆ, ಪಾಪ, ಇವರು ಎಷ್ಟು ವರ್ಷದಿಂದ ನಡೆಸುತ್ತಿದ್ದಾರೆ, ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳನ್ನು ಇವರು ನಡೆಸುತ್ತಿದ್ದಾರೆ. ಅದ್ದರಿಂದ ಮಾನ್ಯ ಅಧ್ಯಕ್ಷರೇ, ಯಾರಾದರೂ ಕೂಡ ಕಾಕ್ ಅಂಡ್ ಬುಲ್ story ಎಂದು ಪ್ರತಿಫಲ ಇಲ್ಲದೇನೆ ಕೊಟ್ಟಿದ್ದಾರೆ ಅಂದರೆ ಯಾರಾದರೂ ಇದನ್ನು ನಂಬುತ್ತಾರೆಯೇ ? ಈಗ ಆದರ್ಶ ಡೆವಲಪರ್ಸ್. ಅವರು ಏಳು ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದಾರೆ. 1.00 ಕೋಟಿ ಚಿಲ್ಲರೆ ಒಂದು ಕಡೆ. ಇನ್ನೊಂದು ಕಡೆ 4.00 ಕೋಟಿ ಚಿಲ್ಲರೆ. ಐದು ಕೋಟಿ ಮುವತ್ತೇಳು ಲಕ್ಷ ರೂಪಾಯಿಗಳು, ಸುಮಾರು 7 ರಿಂದ 8.00 ಕೋಟಿ ರೂಪಾಯಿಗಳಷ್ಟು ಅವರು ಕೊಟ್ಟಿದ್ದಾರೆ. ಏಕೆ ಕೊಟ್ಟಿದ್ದಾರೆ ? ಯಾರೋ ದಯಾಶಂಕರ್ ಎನ್ನುವವರು ಬಂದು ಇವರಲ್ಲಿ one of the Trustees ಆಗಿದ್ದಾರೆ. ಅವರೇಕೆ Trustee ಆದರು ? ಅವರು ಇವೆಲ್ಲಾ ಗೊತ್ತಿದ್ದರೂ ಕೂಡ unlawful ಆಗಿ encroach ಮಾಡಿಕೊಂಡಿದ್ದಾರೆ. ಅಲ್ಲಿ buildings ಕಟ್ಟಿಬಿಟ್ಟಿದ್ದಾರೆ ಎಂದು ಗೊತ್ತಿದ್ದರೂ ಕೂಡ ಅವರನ್ನೇಕೆ ಇವರ ಟ್ರಸ್ಟ್‌ಗೆ ಸದಸ್ಯರನ್ನಾಗಿ ಮಾಡಿಕೊಂಡರು. ಒಟ್ಟು ಸುಮಾರು 40.00 ಕೋಟಿ ರೂಪಾಯಿಗಳಿಗೂ ಹೆಚ್ಚಾಗಿ ಇವತ್ತು ಡೊನೇಷನ್ ಬಂದಿದೆ ಎಂದರೆ ಇದಕ್ಕೆ

ಪ್ರತಿಫಲ ಇಲ್ಲದೇನೆ ಬರಲಿಕ್ಕೆ ಸಾಧ್ಯವೇ ಮಾನ್ಯ ಅಧ್ಯಕ್ಷರೇ ? ಈಗ ಅದರಿಂದ ಏನಾಗಿದೆಯೆಂದರೆ .. ನಾನು ಮಾತನಾಡುತ್ತಿದ್ದೇನೆ.

ಶ್ರೀ ಸಿದ್ದು ಸವದಿ : ಮತ್ತೆ ಹೆಚ್ಚು ಮಾಡಿ ಹೇಳುತ್ತಿದ್ದೀರಿ, 27,18 00 ಕೋಟಿ ಅಂದರೆ ಈಗ 40 ಕೋಟಿ ರೂಪಾಯಿಗಳು ಹೇಗಾಗುತ್ತದೆ ?

(ಗೊಂದಲ)

ಅಧ್ಯಕ್ಷರು : ಪ್ಲೀಸ್, ಕುಳಿತುಕೊಳ್ಳಿ, ಶ್ರೀನಿವಾಸ್, ಅಪ್ಪಚ್ಚುರಂಜನ್‌ರವರೇ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : 27 ಕೋಟಿ ರೂಪಾಯಿಗಳದ್ದೇ ಚರ್ಚೆ ಮಾಡುವುದೇ ? ಬೇರೆ ಚರ್ಚೆಯಿಲ್ಲವೇ ? ಈ ರಾಜ್ಯದಲ್ಲಿ ಬೇರೆ ಯಾವುದರ ಬಗ್ಗೆ ಚರ್ಚೆ ಮಾಡಲಿಕ್ಕೆ ವಿಷಯಗಳಿಲ್ಲವೇ ? ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ, ಆ ಭಾಗದ ಶಾಸಕರು ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಅವರಿಗೆ ಹೇಳಿ, ಸ್ವಲ್ಪ, ನಾವು ಮುಖ್ಯಮಂತ್ರಿಗಳು ಹೇಳುವಾಗ ಕೇಳಿದ್ದೇವೆ.

ಅಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ, ಪ್ಲೀಸ್, ಶ್ರೀನಿವಾಸ್,

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಈಗ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದು ಸವದಿ : ಬೇರೆ ವಿಷಯಗಳ ಚರ್ಚೆಗೆ ಅವಕಾಶ ಮಾಡಿಕೊಡಿ ಅಧ್ಯಕ್ಷರೇ, ಅವರು ಮೂರು ದಿವಸಗಳಿಂದ ಅದನ್ನೇ ಹೇಳುತ್ತಿದ್ದಾರೆ. ಪ್ರಶ್ನೋತ್ತರ ಇದೆ, ಕುಡಿಯಲಿಕ್ಕೆ ನೀರು ಇಲ್ಲದೆ ನಮ್ಮ ಕ್ಷೇತ್ರದಲ್ಲಿ ಜನ ಕಷ್ಟ ಪಡುತ್ತಿದ್ದಾರೆ, ಉತ್ತರ ಹೇಳಿದ್ದಾರಲ್ಲಾ, ಎಷ್ಟು ಸಾರಿ ಅದರ ಬಗ್ಗೆ ಕೇಳುತ್ತಾರೆ ? ಪ್ರಚಾರಕ್ಕಾಗಿ ಮಾತನಾಡಿದರೆ ನಿಮಗೆ ಜನ ಬೆಂಬಲ ಮಾಡುವುದಿಲ್ಲ, ಈ ರೀತಿ ಚಾಳಿ ಸರಿಯಲ್ಲ, ದಯಮಾಡಿ ಅದನ್ನು ಬಿಟ್ಟು ಬಿಡಿ.

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಹತ್ತಿರವೂ ಮಾಹಿತಿಗಳಿವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ರೀತಿ ಆದರೆ ಬಹಳ ಕಷ್ಟ ಸ್ವಾಮಿ.

ಅಧ್ಯಕ್ಷರು : ಶ್ರೀನಿವಾಸ್ ಕುಳಿತುಕೊಳ್ಳಿ, ರೇಣುಕಾಚಾರ್ಯ ಪ್ಲೀಸ್, ತಾವು ಮಂತ್ರಿಗಳಾಗಿದ್ದೀರಿ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಬಹಳ ಗೌರವಯುತವಾಗಿ ಮುಖ್ಯಮಂತ್ರಿಯವರ ಮಾತನ್ನು ಕೇಳಿದ್ದೇವೆ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ : ಅವರು ಹೇಳುವಂತೆ ಯಾರು ಹಣ ತೆಗೆದುಕೊಂಡಿಲ್ಲ, ಮೂರು ದಿವಸಗಳಿಂದ ಇದನ್ನೇ ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ ಪ್ಲೀಸ್, ಯಾವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಸದನದ ಆಡಳಿತ ಪಕ್ಷದ ಸದಸ್ಯರು ಮಾತನಾಡುವುದನ್ನು ದಾಖಲೆಗೆ ತೆಗೆದುಕೊಳ್ಳಬಾರದೆಂದು ತಿಳಿಸಿದರು)

(ಗೊಂದಲ)

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ, ಶ್ರೀನಿವಾಸ್ ಕುಳಿತುಕೊಳ್ಳಿ, ನಾನು ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ಬಾವಿಯಲ್ಲಿ ನಿಂತು ಏನೂ ಹೇಳಬೇಡಿ, ತಮ್ಮ ಸ್ಥಾನಗಳಿಗೆ ಹೋಗಿ. ನಾನು ಎಲ್ಲಾ ಸದಸ್ಯರಲ್ಲಿ ಮತ್ತೊಮ್ಮೆ ವಿನಂತಿಸುತ್ತೇನೆ, ಎಲ್ಲರೂ ಕುಳಿತುಕೊಳ್ಳಿ, ಕಾರ್ಯ ಕಲಾಪವನ್ನು ನಡೆಸೋಣ. ಇದು ಸರಿಯಲ್ಲ, ಪ್ಲೀಸ್, ನಾನು ವಿನಂತಿಸುತ್ತೇನೆ, ಎಲ್ಲಾ ಸದಸ್ಯರು ಕಳಿತುಕೊಳ್ಳಬೇಕು ಹಾಗೂ ಬಾವಿಯಲ್ಲಿದ್ದವರು ತಮ್ಮ ತಮ್ಮ ಸ್ಥಳಕ್ಕೆ ಹೋಗಬೇಕು. ತಾವೆಲ್ಲರೂ ಸಹಕರಿಸಿ, ಕಲಾಪವನ್ನು ನಡೆಸೋಣ. ಪ್ಲೀಸ್.

(ಗೊಂದಲ)

ಅಧ್ಯಕ್ಷರು : ತಾವು ಏನೂ ಮಾತನಾಡಿದರೂ ಯಾವುದು ದಾಖಲೆಗೆ ಹೋಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಈಗ ಕುಳಿತುಕೊಳ್ಳಿ ಪ್ಲೀಸ್, ಐದು ನಿಮಿಷದಲ್ಲಿ ಸಿದ್ದರಾಮಯ್ಯನವರೇ ಮಾತನಾಡಿ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಈಗ ನಮಗೆ ನೀವು ಮಾತನಾಡಬೇಡಿ ಎಂದರೆ ನಾವು ಮಾತನಾಡುವುದಿಲ್ಲ. ನೀವು ಅಸೆಂಬ್ಲಿಗೆ ಬರಬೇಡಿ ಎಂದರೆ ಬರುವುದಿಲ್ಲ. ಅವರಿಗೆ ಎಲ್ಲಾ ರೀತಿಯ ಸರ್ವಾಧಿಕಾರ ಇದೆ ಎಂದರೆ ನಾವು ಅಸೆಂಬ್ಲಿಗೆ ಬರುವುದೇ ಇಲ್ಲ. ಅವರಿಗೆ ಇಷ್ಟ ಬಂದ ಹಾಗೆ ಮಾತನಾಡಿಕೊಳ್ಳುವುದಿದ್ದರೆ ಮಾತನಾಡಿಕೊಳ್ಳಲಿ, ಪ್ರಜಾಪ್ರಭುತ್ವದಲ್ಲಿ ಈ ರೀತಿಯಾದರೆ ಹೇಗೆ ಹೇಳಿ ನೋಡೋಣ ? ಈಗೇನು ಹೊಸದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆಯೇ ?

ಶ್ರೀ ಆರ್. ಅಶೋಕ್ (ಗೃಹ ಸಚಿವರು) : ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ, Bills ಇವೆ.

ಶ್ರೀ ಸಿದ್ದರಾಮಯ್ಯ : ಪಾರ್ಲಿಮೆಂಟರಿಯಲ್ಲಿ 25 ದಿವಸಗಳ ಕಾಲ ನಿಮ್ಮ ಬಿಜೆಪಿಯವರು ಸದನ ನಡೆಯಲಿಕ್ಕೆ ಬಿಟ್ಟಿಲ್ಲ. 25 ದಿವಸಗಳ ಕಾಲ ಧರಣಿ ನಡೆಸಿದರು.

(ಗೊಂದಲ)

ಶ್ರೀ ಆರ್. ಅಶೋಕ್ : ಬಿಲ್ಸ್ ಇವೆ, ದಯಮಾಡಿ ಸದನ ನಡೆಸಲಿಕ್ಕೆ ಅವಕಾಶ ಮಾಡಿ ಕೊಡಿ. ಸಾರ್ವಜನಿಕರಿಗೆ ಅನುಕೂಲವಾಗಲಿ. Bills ಆದರೂ ಅಪ್ರೂವ್ ಆಗಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಮಗೊಂದು yardstick, ನಿಮಗೊಂದು yardstick ಇದೆಯೇ ? ನಾವು ಬಜೆಟ್ ಪಾಸ್ ಮಾಡಿಕೊಳ್ಳಲಿಕ್ಕೆ ಸಹಕಾರ ಕೊಡಲಿಲ್ಲವೇ ?

ಅಧ್ಯಕ್ಷರು : ಕುಳಿತುಕೊಳ್ಳಿ, ನೀವು ಮಂತ್ರಿಗಳೇ ಹೀಗೆ ಎದ್ದು ನಿಂತು ಮಾತನಾಡಿದರೆ ಹೇಗೆ ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ದಯಮಾಡಿ ಅವರನ್ನೆಲ್ಲಾ ಆಚೆಗೆ ಹಾಕಿಸಿ.

(ಗೊಂದಲ)

ಶ್ರೀ ಸುರೇಶ್‌ಕುಮಾರ್ (ಕಾನೂನು ಸಚಿವರು) : ಪ್ರತಿಪಕ್ಷದ ಮಾನ್ಯ ಸದಸ್ಯರೆಲ್ಲರೂ ಕೂಡ ಬಾವಿಯಿಂದ ಹೊರಗೆ ಬರುವವರೆಗೂ ಯಾರೊಬ್ಬರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಡಿ. ದಯವಿಟ್ಟು ಬೇಡ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಇವರೆಲ್ಲರೂ ಕೂಡ well ನಿಂದ ಆಚೆಗೆ ಬರುವವರೆಗೂ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ. (ಗೊಂದಲ) Action and reaction. So ಮಾನ್ಯ ಅಧ್ಯಕ್ಷರೆ, ಬಾವಿಯಿಂದ ಅವರವರ ಸ್ಥಾನಗಳಿಗೆ ಹೋಗುವವರೆಗೂ ಯಾರಿಗೂ ಕೂಡ ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಲ್ಲ ಮಾನ್ಯ ಮಖ್ಯಮಂತ್ರಿಯವರಿಗೆ ಏಕೆ ಅವಕಾಶ ಕೊಟ್ಟಿರಿ ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಅಲ್ಲ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿದ್ದಾರಲ್ಲಾ, ಅದಕ್ಕೆ ಉತ್ತರ ಕೊಟ್ಟರೆ ಇವರು action and reaction ಎಂದು ಹೇಳುತ್ತಾರಲ್ಲ, ಅದನ್ನು ಕಡತದಿಂದ ತೆಗೆದು ಹಾಕಿ, ಬರೋಬ್ಬರಿ ಮೂರು ವರ್ಷವಾಯಿತು. ಮಾತನಾಡಿದರೆ ನಾವು ಕೊಡುತ್ತೇವೆ ನಾವು ಕೊಡುತ್ತೇವೆ. ಛೇ !ಛೆ !

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಏನೂ ಮಾತನಾಡುವ ಹಾಗಿಲ್ಲವೇ ?

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಿರುವಾಗ ನೀವು ಕುಳಿತುಕೊಳ್ಳುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಪ್ರತಿಪಕ್ಷದ ನಾಯಕರಿಗೆ ಯಾವುದೇ ವಿಷಯದ ಬಗ್ಗೆ ತಾವು ಮಾತನಾಡುವುದಕ್ಕೆ ಎಷ್ಟು ಅವಕಾಶ ಕೊಡುತ್ತೀರೋ ಅಷ್ಟು ಮಾತನಾಡುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇದೆ, ಅದಕ್ಕಾಗಿ ನೀವು ಪ್ರತಿಪಕ್ಷದಲ್ಲಿದ್ದೀರಿ. ಉತ್ತರ ಕೊಡುವುದಕ್ಕೆ ನಾನು ಆಡಳಿತ ಪಕ್ಷದಲ್ಲಿದ್ದೇನೆ. ಅದರ ಬಗ್ಗೆ ಎರಡು ಮಾತಿಲ್ಲ. ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಗಣಿಗಾರಿಕೆ, ಹಗರಣಗಳ ಬಗ್ಗೆ ಇನ್ನೊಮ್ಮೆ ಚರ್ಚೆ ಮಾಡಬೇಕು ಎಂದರೆ, ಒಂದು ದಿವಸ ಚರ್ಚೆ ಮಾಡುವುದಕ್ಕೂ ನಾನು ಸಿದ್ಧನಿದ್ದೇನೆ. ಎಲ್ಲದಕ್ಕೂ ಉತ್ತರ ಕೊಡುತ್ತೇನೆ. ತೀರ್ಮಾನ ಜನ ಮಾಡಲಿ. ಆದರೆ, ನೀವು ಅಲ್ಲಿ ನಿಂತುಕೊಂಡು, ಉಳಿದವರೆಲ್ಲಾ ನಿಂತುಕೊಂಡು ಇಲ್ಲಿ ಕಾರ್ಯಕಲಾಪ ನಡೆಯುವುದಕ್ಕೆ ಅಡ್ಡಿ ಮಾಡುವುದು ಸೂಕ್ತವಲ್ಲ. ದಯಮಾಡಿ ಈ ರೂಲ್‌ನಲ್ಲಿ ಅವಕಾಶವಿಲ್ಲ. ಒಂದು ಸಾರಿ ಸರಿ, ಎರಡು ಸಾರಿ ಸರಿ, ಮೂರು ದಿನವೂ ಇದೇ ಮಾಡಿ ಪ್ರಚಾರ ತೆಗೆದುಕೊಳ್ಳುತ್ತೇವೆ ಎಂದರೆ ಇದಕ್ಕೆ ದಯಮಾಡಿ ನೀವು ಅವಕಾಶ ಕೊಡಬೇಡಿ. ನಮ್ಮ ರೂಲ್ಸ್‌ನಲ್ಲಿ ಎಲ್ಲೂ ಅವಕಾಶವಿಲ್ಲ. ಅದನ್ನೇ ನಮ್ಮ ಲಾ ಮಿನಿಸ್ಟರ್ ಹೇಳುವಂತಹದ್ದು.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೇ, 2G spectrum Raja case ನಲ್ಲಿ ಮಾನ್ಯ ಮುಖ್ಯಮಂತ್ರಿ ಕರುಣಾನಿಧಿಯವರದ್ದು ಮತ್ತು ಅವರ sisterದ್ದೂ ಕೂಡ ತನಿಖೆಯಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಮಗೆ ಪ್ರಚಾರದ ಹುಚ್ಚಿಲ್ಲ. ಪ್ರಚಾರಕ್ಕೋಸ್ಕರ ಮಾತನಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಏಕಕಾಲದಲ್ಲಿ ಮಾತನಾಡಿದರೆ ಹೇಗೆ ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ.

(ಗೊಂದಲ)

ಅಧ್ಯಕ್ಷರು : ನಾನು ಎಲ್ಲರಲ್ಲೂ ವಿನಂತಿ ಮಾಡುತ್ತೇನೆ. ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇಡೀ ದೇಶದಲ್ಲಿಯೇ ಭ್ರಷ್ಟಾಚಾರದಲ್ಲಿ ಕರ್ನಾಟಕ ನಂಬರ್ ಒನ್. ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ದೇಶದ ಜನರು ಮಾತನಾಡುತ್ತಾರೆ. ಅವರ ಸ್ವಂತ ಟ್ರಸ್ಟ್‌ಗೆ ದುಡ್ಡು ತೆಗೆದುಕೊಂಡಿದ್ದಾರೆ ಎಂದು ಮಾತನಾಡಿಕೊಳ್ಳುತ್ತಾರೆ. ಮಾನ್ಯ ಅಧ್ಯಕ್ಷರೆ, ನಮಗೆ ಪ್ರಚಾರದ ಹುಚ್ಚಿಲ್ಲ. ಸುಮ್ಮ-ಸಮ್ಮನೆ ಮಾತನಾಡಬೇಕೆಂಬ ಹುಚ್ಚಿಲ್ಲ. ಮಾನ್ಯ ಯಡಿಯೂರಪ್ಪನವರು ಹೇಳಿದ ಕೆಲವು ವಿಚಾರಗಳಿಗೆ ನಾವು ಉತ್ತರ ಹೇಳುವುದು ಮತ್ತು react ಮಾಡುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ನಾವು ಈಗಾಗಲೇ ಮಾತನಾಡುವುದನ್ನೆಲ್ಲಾ ಮಾತನಾಡಿದ್ದೇವೆ. ಆ ಜಿಂದಲ್‌ನವರು ತೋರಣಗಲ್‌ನಲ್ಲಿ ಕುಡಿಯುವುದಕ್ಕೆ ನೀರಿಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಸ್ವಾಮಿ ನಿನ್ನೆ ನಾವು ಹೇಳಿದ್ದೇವೆ. ....

(ಗೊಂದಲ)

ಶ್ರೀ ಸಿದ್ದರಾಮಯ್ಯ : ಕುಡಿಯುವ ನೀರಿಗೆ ಒಂದು ರೂಪಾಯಿ ಕೊಡದೇ ಇರುವವರು, ರೋಡಿಗೆ ಒಂದು ರೂಪಾಯಿ ಕೊಡದೇ ಇರುವವರು, ಇವರಿಗೆ 40 ಕೋಟಿ ಕೊಟ್ಟಿದ್ದಾರೆ ಎಂದರೆ, ಅವರೇನು ಧರ್ಮಾತ್ಮರೇ ?

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ಅದನ್ನು ಚರ್ಚೆ ಮಾಡಿ ಮೊದಲು. 167 ಕೋಟಿ ಹೇಗೆ ಬಂತು ಅವರಿಗೆ, ಯಾವಾಗ ಬಂತು, ಯಾವ ಕಂಪನಿದೂ, ಇದು ಯಾವ ಕಂಪನಿ ಎಂದು ಚರ್ಚೆ ಮಾಡಲಿ. ಅದು ಆಗುವುದಿಲ್ಲವೇ ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರು ದಾನಶೂರ ಕರ್ಣನಾ ? ಅದನ್ನು ಅವರ ಕಡೆ ಹುಡುಕಿಕೊಂಡು ಬಂದು ಏಕೆ ಕೊಟ್ಟಿದ್ದಾರೆ ? ಆಶ್ರಯ ಮನೆಗೆ ಒಂದು ರೂಪಾಯಿ ಕೊಟ್ಟಿಲ್ಲ.

ಅಧ್ಯಕ್ಷರು : ಎಲ್ಲಾ ತಮ್ಮ ಸ್ಥಾನಗಳಿಗೆ ಹೋಗಿ ಸಹಕಾರ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಲ್ಲಿ ಪ್ರವಾಹದಿಂದ ಪೀಡಿತರಾದವರಿಗೆ ಒಂದು ರೂಪಾಯಿ ದುಡ್ಡು ಕೊಟ್ಟಿಲ್ಲ. ಸರ್ಕಾರ ಮಲಗಿಕೊಂಡಿದೆ ಮೂಡಿ ಎಂದು ಅವರು ಹೇಳುತ್ತಾರೆ. ಅವರ ಹತ್ತಿರ ದುಡ್ಡು ತೆಗೆದುಕೊಂಡು ಅವರಿಗೆ ಲೈಸೆನ್ಸ್ ಕೊಡುತ್ತೇನೆ, ಅವರಿಗೆ defend ಮಾಡುತ್ತಿದ್ದೇವೆ ಎಂದು ಹೇಳುವುದು ಇದೆಯಲ್ಲಾ ಇದು ಬಂಡತನದ ಪರಮಾವಧಿ. ಮಾನ್ಯ ಅಧ್ಯಕ್ಷರೆ, ಬಂಡತನಕ್ಕೆ ಬಿದ್ದವರಿಗೆ ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ ನೈತಿಕತೆ ಮುಖ್ಯ, ಈಗ ಗಡ್ಕರಿಯವರು ಇವರಿಗೆ ಹೇಳಿದರು, . . .

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಇದನ್ನು detail ಆಗಿ ಮಾತನಾಡುತ್ತಿದ್ದೇನೆ. ನೋಡಿ ಸಾರ್. ನಿನ್ನೆ CEC ಏನು ಹೇಳಿದೆ ? (ಗೊಂದಲ) ರೂ. 23 ಕೋಟಿ ಬಗ್ಗೆ ಲೋಕಾಯುಕ್ತದವರು ಆರೋಪ ಮಾಡಿದ್ದಾರೆ ಹಿಂದಿನ ಮುಖ್ಯಮಂತ್ರಿ ಧರ್ಮಸಿಂಗ್‌ರವರ ಬಗ್ಗೆ. ಏಕೆ ಹಣ ವಸೂಲು ಮಾಡಿಲ್ಲವೆಂದು CEC ಯಲ್ಲಿ ಮತ್ತೆ ಚರ್ಚೆ ಪ್ರಾರಂಭವಾಗಿದೆ ನೋಡಿದ್ದೀರಾ ? CEC ಯಲ್ಲಿ ಹಿಂದಿನ ಮುಖ್ಯಮಂತ್ರಿ ಬಗ್ಗೆ ಲೋಕಾಯುಕ್ತದವರು ರೂ. 23 ಕೋಟಿ ವಸೂಲು ಮಾಡಬೇಕೆಂದು ಆದೇಶ ಮಾಡಿದ್ದಾರೆ. ಏಕೆ ಮಾಡಿಲ್ಲವೆಂದು ಪ್ರಸ್ತಾಪ ಮಾಡುತ್ತೇನೆ, ಬನ್ನಿ ಚರ್ಚೆ ಶುರು ಮಾಡೋಣ, ಕರೆಯಿರಿ ಅವರನ್ನು.

(ಗದ್ದಲ)

ಅಧ್ಯಕ್ಷರು : ಈಗ ಸದನವನ್ನು ಒಂದು ಗಂಟೆ ಕಾಲ ಮುಂದೂಡಿದೆ.

(ಸದನವನ್ನು 12 ಗಂಟೆ 44 ನಿಮಿಷಕ್ಕೆ ಮುಕ್ತಾಯಗೊಳಿಸಿ ಒಂದು ಗಂಟೆ ಕಾಲದವರೆಗೆ ಮುಂದೂಡಲಾಯಿತು)

ಸದನವು ಪುನಃ ಮಧ್ಯಾಹ್ನ 1 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.

(ಮಾನ್ಯ ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಈ ಹಂತದಲ್ಲಿ ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಪಕ್ಷದ ಸದಸ್ಯರು ಸದನದ ಬಾವಿಯೊಳಗೆ ಸಿ.ಬಿ.ಐ. ತನಿಖೆ ನಡೆಸಬೇಕೆಂದು ಘೋಷಣೆ ಕೂಗುತ್ತಾ ಧರಣಿ ನಿರತರಾಗಿದ್ದರು.)

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ವಿನಂತಿ ಏನೆಂದರೆ, ಸಹಕಾರ ನೀಡಿ. ಸದನದ ಕಾರ್ಯಕಲಾಪಗಳನ್ನು ನಡೆಸೋಣ. ವಿಶೇಷವಾಗಿ ಮಾನ್ಯ ವಿರೋಧಪಕ್ಷದ ನಾಯಕರುಗಳಲ್ಲಿ ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಸಹಕಾರ ಮಾಡಿ.

(ಗೊಂದಲ)

ಅಧ್ಯಕ್ಷರು : ಸಾಕಷ್ಟು ವಿಷಯಗಳಿಗೆ ಸಂಬಂಧಪಟ್ಟ ಅನೇಕ ಸಮಸ್ಯೆಗಳಿವೆ. ಸರ್ಕಾರದಿಂದ ಉತ್ತರ ಬಯಸುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಾನು ಮತ್ತೆ ಮತ್ತೆ ವಿರೋಧಪಕ್ಷದ ನಾಯಕರಲ್ಲಿ ವಿಶೇಷವಾದ ವಿನಂತಿಯನ್ನು ಮಾಡುತ್ತಿದ್ದೇನೆ.

(ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಪಕ್ಷದ ಸದಸ್ಯರು ಸದನದ ಬಾವಿಯೊಳಗೆ ಸಿ.ಬಿ.ಐ. ತನಿಖೆ ಆಗಲೇಬೇಕು. ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಲೇಬೇಕು ಎಂದು ಘೋಷಣೆ ಕೂಗುತ್ತಿದ್ದರು.)

ಅಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಗಿದೆ.

ಸದನವನ್ನು ಮಧ್ಯಾಹ್ನ 1 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಳಿಸಿ ಪುನಃ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.

(ಸದನವು ಪುನಃ ಸಂಜೆ 4.36 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು)

(ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷಗಳ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿದ್ದರು.

(ಗೊಂದಲ)

ಅಧ್ಯಕ್ಷರು : ಈಗ ಪ್ರಶ್ನೋತ್ತರ, ದಯವಿಟ್ಟು ಸದನದ ಕಲಾಪ ನಡೆಸುವುದಕ್ಕೆ ಸಹಕಾರ ಮಾಡಿ.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಬಿಲ್ಸ್ ಇವೆ, ಅವುಗಳನ್ನು ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನಾನು ಎಲ್ಲ ಸದಸ್ಯರನ್ನು ವಿನಂತಿ ಮಾಡುತ್ತೇನೆ, ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು : ಇಲ್ಲಿ ಏನು ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲ. ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ (ತಮ್ಮ ಸ್ಥಾನದಿಂದ) : ಸಿ.ಬಿ.ಐ. ತನಿಖೆ ಬಿಟ್ಟು ಬೇರೆ ಯಾವುದೇ ತನಿಖೆಗೆ ಸಿದ್ಧರಿದ್ದೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಆ ರೀತಿ ಬೇರೆ ತನಿಖೆ ಮಾಡಿಸಿ, ಅವರು ಆ ರೀತಿ ಹೇಳಿದರಲ್ಲವೇ ?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು ಎಂದು ನಾನು ವಿನಂತಿಯನ್ನು ಮಾಡುತ್ತೇನೆ. ಈಗ ಪ್ರಶ್ನೋತ್ತರ.

2. ಪ್ರಶ್ನೋತ್ತರ :

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಪ್ರಶ್ನೆ ಸಂಖ್ಯೆ 545

(ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಲಿಲ್ಲ)

ಪ್ರಶ್ನೆ ಸಂಖ್ಯೆ 1148

(ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಲಿಲ್ಲ)